ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 335/2022**

**ಫ್ರಾಸಾ- 4 ಚಾಸಾ- 4**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರೋಜ |
| ಗಂಡನ ಹೆಸರುಃ | : | ಗಿರೀಶ |
| ವಯಸ್ಸುಃ | : | 27 ವರ್ಷ |
| ಉದ್ಯೋಗಃ | : | ಗೃಹಿಣಿ |
| ವಾಸ | : | ಹುಣಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:13-11-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1 ನನ್ನ ಭಾವ. ಚಾಸಾ-2 ನನ್ನ ತಾಯಿ ಚಾಸಾ-3 ನನ್ನ ತಂಗಿ. ಚಾಸಾ-5 ಗೊತ್ತಿಲ್ಲ. ಆರೋಪಿ ನನ್ನ ಚಿಕ್ಕಪ್ಪ. ಆರೋಪಿತರು ದೃಷ್ಟಿಗೊಂಬೆ ಕೆಲಸ ಮಾಡುತ್ತಾರೆ.ಸುಮಾರು 2 ವರ್ಷಗಳ ಹಿಂದೆ ನಾನು ಮನೆಯಲ್ಲಿದ್ದಾಗ ನನ್ನ ಕುತ್ತಿಗೆ ಬಳಿ ಏಟಾಗಿತ್ತು. ಹೇಗಾಯಿತೆಂದು ಗೊತ್ತಿಲ್ಲ. ಆಗ ಮಧ್ಯಾಹ್ನ ಆಗಿತ್ತು. ನನ್ನ ಮಕ್ಕಳಿಗೂ ಏಟಾಗಿತ್ತು. ಆರೋಪಿ ಹಂದಿಗಳನ್ನು ಸಾಯಿಸಲು ಕಚ್ಚಾ ಸ್ಫೋಟಕ ಉಂಡೆ ತಯಾರಿಸುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ಆರೋಪಿಯ ಮನೆ ನಮ್ಮ ಮನೆ ಪಕ್ಕದಲ್ಲಿ ಇರುವುದಿಲ್ಲ. ಆರೋಪಿತರು ಆ ರೀತಿ ಸ್ಫೋಟಕದ ಉಂಡೆಯನ್ನು ತಯಾರು ಮಾಡಿ ಒಣಗಿಸಲು ಇಟ್ಟಿದ್ದ ಉಂಡೆ ಸಿಡಿದು ನನಗೆ ಚಾಸಾ-2 ಮತ್ತು 4 ಹಾಗೂ ನಮ್ಮ ಮಕ್ಕಳಿಗೆ ಗಾಯವಾಗಿಲ್ಲ. ಆ ಕಾರಣಕ್ಕಾಗಿ ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ಆರೆೋಪಿಯು ನಮ್ಮ ಪಕ್ಕದ ಮನೆಯಲ್ಲಿಯೇ ವಾಸವಿದ್ದು ಅವರ ಮನೆ ಮಹಡಿಯ ಮೆಟ್ಟಿಲಿನ ಮೇಲೆ ಆಗಾಗ್ಗೆ ಯಾವುದೋ ವಸ್ತುವನ್ನು ಒಣಗಲು ಇಡುತ್ತಿದ್ದರು, ಈ ಬಗ್ಗೆ ಕೇಳಿದರೆ ಹಂದಿಗಳನ್ನು ಓಡಿಸಲು ಬಳಸುವ ಪಟಾಕಿ ಉಂಡೆ ಎಂದು ಹೇಳುತ್ತಿದ್ದನುಎಂದರೆ ಸರಿಯಲ್ಲ. ದಿನಾಂಕ 28-8-22ರಂದು ನಾವು ಮಧ್ಯಾಹ್ನ ಸುಮಾರು 1-15 ಗಂಟೆಗೆ ನಾನು, ಚಾಸಾ-2, 3 ಮತ್ತು ನಮ್ಮ ನಮ್ಮ ಮಕ್ಕಳು ಮನೆಯಲ್ಲಿದ್ದಾಗ ಆರೋಪಿ ತಮ್ಮ ಮನೆ ಶೀಟ್ ಮೇಲೆ ಒಣಗಲು ಇಟ್ಟಿದ್ದ ವಸ್ತು ಸಿಡಿದು ಮನೆಯ ಶೀಟುಗಳು ಹಾರಿಹೋದವು ಮತ್ತು ಛಿದ್ರಗೊಂಡವು ಎಂದರೆ ಸರಿಯಲ್ಲ. ಅದರಿಂದಾಗಿ ನನಗೆ ತಲೆಗೆ ಎಡಕಾಲಿನ ಹೆಬ್ಬೆರಳಿಗೆ, ಚಾಸಾ-2ರವರಿಗೆ ಎಡಕೈಗೆ ಬಲಹಣೆಗೆ, ಬಲಕೆನ್ನೆಗೆ ಮತ್ತು ಗದ್ದಕ್ಕೆ ಹಾಗೂ ಚಾಸಾ-4ರವರಿಗೆ ಕುತ್ತಿಗೆ ಹಿಂಭಾಗ ಮತ್ತು ಅವರ ಮಗುವಿಗೆ ಹಣೆಗೆ ಹಾಗೂ ಬಲಕೆನ್ನೆಗೆ ಗಾಯವಾಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ನಾವು ಸ್ಪರ್ಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದದ್ದು ಎಂದರೆ ಸರಿಯಲ್ಲ. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿ ನನ್ನ ಸಂಬಂಧಿಕನಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ಇಲ್ಲವೆಂದು ಹೇಳುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**